ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ. ದಂಡಾಧಿಕಾರಿಗಳ ನ್ಯಾಯಾಲಯ,
ಆನೇಕಲ್.

| | |
|---|---|
| **ಸಿ.ಸಿ. ನಂ :-** | **3843/2024** |
| ಸಿ.ಡಬ್ಲ್ಯೂ: **-03** | ಪಿ.ಡಬ್ಲ್ಯೂ**-03** |
| **ದಿನಾಂಕ :-** | **18.03.2026** |

| | |
|---|---|
| ಹೆಸರು | ರಮೇಶ್ |
| ತಂದೆ/ತಾಯಿ/ ಗಂಡನ ಹೆಸರು | ಗೋಪಿ |
| ವಯಸ್ಸು | 30 ವರ್ಷ |
| ಉದ್ಯೋಗ | ಖಾಸಗಿ ಕೆಲಸ |
| ವಾಸ | ಆನೇಕಲ್ |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಪ್ರಾಜ್ಞ ಸ. ಸ. ಅ ರವರಿಂದ

ಸಾಕ್ಷಿಗೆ ಸ್ಥಳ ಪಂಚನಾವೆಯನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ಈಗಾಗಲೇ ನಿಪಿ-4 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಸುಮಾರು ಎರಡು ವರ್ಷಗಳ ಹಿಂದೆ ಪೊಲೀಸರ ಕೋರಿಕೆಯ ಮೇರೆಗೆ ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಅದರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ಮೃತ ವ್ಯಕ್ತಿ ಯಾರು ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ಸ್ಥಳ ಪಂಚನಾಮೆ ಮಾಡಿ ಯಾವುದೇ ವಾಹನವನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ.

ಮಾನ್ಯ ಸ. ಸ. ಅ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಹಾಗೂ ಪಾಟೀ ಸವಾಲಿಗೆ ಅವಕಾಶ ಕೋರಿದ್ದು, ಅವರ ಮನವಿ ಅಂಗೀಕರಿಸಿ ಪಾಟೀ ಸವಾಲಿಗೆ ಅವಕಾಶ ಮಾಡಿಕೊಡಲಾಗಿದೆ.)

ಪಾಟೀ ಸವಾಲುಃ ಪ್ರಾಜ್ಞ ಸ. ಸ. ಅ ರವರಿಂದ

ದಿನಾಂಕಃ 24.01.2024 ರಂದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಘಟನಾ ಸ್ಥಳದಲ್ಲಿ ಬೆಳಿಗ್ಗೆ 09-30 ರಿಂದ 10-00 ರವರೆಗೆ ಪೊಲೀಸರು ಸ್ಥಳ ಪಂಚನಾಮೆ ಮಾಡಿ ಅಪಘಾತದಲ್ಲಿ ಭಾಗಿಯಾದ ವಾಹನ ಸ್ಕೂಟರ್ ಸಂಖ್ಯೆ ಕೆಎ-59 ಜೆ-9167 ಅನ್ನು ಅಮಾನತ್ತುಪಡಿಸಿಕೊಂಡರು ಎಂದರೆ ಸರಿಯಲ್ಲ. ಈ ಎಲ್ಲಾ

ವಿಚಾರಗಳು ಗೊತ್ತಿದ್ದರು, ಈಗ ಆರೋಪಿತರೊಂದಿಗೆ ರಾಜೀ ಮಾಡಿಕೊಂಡು, ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲವೆಂದು ತಿಳಿಸಿದರು

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರನಿಗೆ ಓದಿ ಹೇಳಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾದಂಡಾಧಿಕಾರಿಗಳು, ಆನೇಕಲ್.

## ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಆನೇಕಲ್.

| | |
|---|---|
| **ಸಿ.ಸಿ. ನಂ :-** | **3843/2024** |
| ಸಿ.ಡಬ್ಲ್ಯೂ: -02 | ಪಿ.ಡಬ್ಲ್ಯೂ-02 |
| **ದಿನಾಂಕ :-** | **18.03.2026** |

| | |
|---|---|
| ಹೆಸರು | ಮುರಳಿ ಮೋಹನ್ |
| ತಂದೆ/ತಾಯಿ/ ಗಂಡನ ಹೆಸರು | ಚಿನ್ನಪ್ಪ |
| ವಯಸ್ಸು | 43 ವರ್ಷ |
| ಉದ್ಯೋಗ | ನೇಕಾರಿಕೆ |
| ವಾಸ | ಆನೇಕಲ್ |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಪ್ರಾಜ್ಞ ಸ. ಸ. ಅ ರವರಿಂದ

ಸಾಕ್ಷಿಗೆ ಸ್ಥಳ ಪಂಚನಾವೆಯನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಸುಮಾರು ಎರಡು ವರ್ಷಗಳ ಹಿಂದೆ ಪೊಲೀಸರ ಕೋರಿಕೆಯ ಮೇರೆಗೆ ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಅದರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ಮೃತ ವ್ಯಕ್ತಿ ಯಾರು ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ಸ್ಥಳ ಪಂಚನಾಮೆ ಮಾಡಿ ಯಾವುದೇ ವಾಹನವನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಹಾಗೂ ನಾನು ಪೊಲೀಸರಿಗೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

ಮಾನ್ಯ ಸ. ಸ. ಅ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಹಾಗೂ ಪಾಟೀ ಸವಾಲಿಗೆ ಅವಕಾಶ ಕೋರಿದ್ದು, ಅವರ ಮನವಿ ಅಂಗೀಕರಿಸಿ ಪಾಟೀ ಸವಾಲಿಗೆ ಅವಕಾಶ ಮಾಡಿಕೊಡಲಾಗಿದೆ.)

ಪಾಟೀ ಸವಾಲುಃ ಪ್ರಾಜ್ಞ ಸ. ಸ. ಅ ರವರಿಂದ

ದಿನಾಂಕಃ 24.01.2024 ರಂದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಘಟನಾ ಸ್ಥಳದಲ್ಲಿ ಬೆಳಿಗ್ಗೆ 09-30 ರಿಂದ 10-00 ರವರೆಗೆ ಪೊಲೀಸರು ಸ್ಥಳ ಪಂಚನಾಮೆ ಮಾಡಿ ಅಪಘಾತದಲ್ಲಿ ಭಾಗಿಯಾದ ವಾಹನ

ಸ್ಕೂಟರ್ ಸಂಖ್ಯೆ ಕೆಎ-59 ಜೆ-9167 ಅನ್ನು ಅಮಾನತ್ತುಪಡಿಸಿಕೊಂಡರು ಎಂದರೆ ಸರಿಯಲ್ಲ. ಈ ಕುರಿತು ನಾನು ಈಗ ಓದಿ ಹೇಳಿದಂತೆ ನಾನು ಮೇಲ್ಕಂಡ ------------------- ಮಾಡಿರುತ್ತೇನೆ ಎಂದು ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-5 ಎಂದು ಗುರುತಿಸಲಾಯಿತು. ಈ ಎಲ್ಲಾ ವಿಚಾರಗಳು ಗೊತ್ತಿದ್ದರು, ಈಗ ಆರೋಪಿತರೊಂದಿಗೆ ರಾಜೀ ಮಾಡಿಕೊಂಡು, ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲವೆಂದು ತಿಳಿಸಿದರು

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರನಿಗೆ ಓದಿ ಹೇಳಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾದಂಡಾಧಿಕಾರಿಗಳು, ಆನೇಕಲ್.